ಅಸಲು ದಾವೆ ನಂ.18/2024

ಪಿ.ಡಬ್ಲ್ಯೂಃ 1- ರಮೇಶ್ ಬಾಬು ಜಿ ಬಿನ್ ಗೋಪಾಲಪ್ಪ

ದಿನಾಂಕಃ 02/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ ಕೆ.ವಿ.ಪಿ. ವಕೀಲರಿಂದ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ದಾವೆಯಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ರಾಮಕೃಷ್ಣಪ್ಪರವರು ನನ್ನ ಹೆಸರಿನಲ್ಲಿ ಬರೆದುಕೊಟ್ಟ ಆನ್ ಡಿಮಾಂಡ್ ಪ್ರಾಮಿಸರಿ ನೋಟ್ ಮತ್ತು ಹಣ ಸಂದಾಯ ರಸೀದಿಯನ್ನು **ನಿಪಿ-1,** ನಾನು ವಕೀಲರ ಮುಖಾಂತರ ಪ್ರತಿವಾದಿಯರಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು **ನಿಪಿ-2,** ಅಂಚೆ ರಸೀದಿಗಳನ್ನು **ನಿಪಿ-3 ರಿಂದ ನಿಪಿ-6,** ಅಂಚೆ ಲಕೋಟೆಗಳನ್ನು **ನಿಪಿ-7 ಮತ್ತು ನಿಪಿ-8** ಹಾಗೂ ಅಂಚೆ ಕಚೇರಿಯವರು ನೀಡಿರುವ ಹಿಂಬರಹಗಳನ್ನು **ನಿಪಿ-9 ರಿಂದ ನಿಪಿ-12** ಎಂದು ಗುರುತಿಸಲಾಯಿತು.

ಆದ್ದರಿಂದ ಈ ದಾವೆಯನ್ನು ಡಿಕ್ರಿಗೊಳಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು 1 ರಿಂದ 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಪಿ.ಆರ್. ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್